ಶ್ರೀಮತಿ ಸುನೀತ ವೀರಪ್ಪಗೌಡ : ಸಂಪೂರ್ಣ ಉತ್ತರವೇ ತಪ್ಪು ಕೊಟ್ಟಿದ್ದಾರೆ.

ಅಧ್ಯಕ್ಷರು : ಸಚಿವರು ಉಪ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಉತ್ತರ ಕೊಡಲಿ.

ಶ್ರೀ ರಾಮಚಂದ್ರಗೌಡ : ಅಧಿಕಾರಿಗಳನ್ನು ನಿಮ್ಮ ಎದುರಿಗೆ ಕೂರಿಸಿ ಮಾತನಾಡಿಸಿ ಏನು ಪರಿಹಾರ ಸಿಗಬೇಕೋ ಅದನ್ನು ನಾನು ಮಾಡಿಸಿಕೊಡುತ್ತೇನೆ.

ಜಮೀನನ್ನು ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕಾಗಿ ಬಳಸುವುದು

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೪೪ (೧೯೮೩)

ಸದಸ್ಯರ ಹೆಸರು : ಡಾ॥ ಸುಧಾಕರ್ ಎಂ.ಸಿ (ಚಿಂತಾಮಣಿ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಚಿಂತಾಮಣಿ ತಾಲ್ಲೂಕು ಕಸಬಾ ಹೋಬಳಿ, ಸೊಣಶೆಟ್ಟಹಳ್ಳಿ ಗ್ರಾಮದ ಸರ್ವೆ ನಂಬರ್ ೪೯ರಲ್ಲಿ ಸಾರ್ವಜನಿಕರ ಉದ್ದೇಶಕ್ಕಾಗಿ ಇಟ್ಟಿರುವ ಕೆರೆ ಅಂಗಳವನ್ನು ಅನಧಿಕೃತವಾಗಿ ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಒತ್ತುವರಿದಾರರನ್ನು ಯಾವಾಗ ತೆರವುಗೊಳಿಸಲಾಗುವುದು ;

ಇ) ತೆರವುಗೊಳಿಸಲಾದ ಕೆರೆಯ ಜಮೀನನ್ನು ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕಾಗಿ ಉಪಯೋಗಿಸಲಾಗುವುದೇ ;

ಉತ್ತರ

ಅ) ಹೌದು

ಆ) ಚಿಂತಾಮಣಿ ತಾಲ್ಲೂಕು ಸೊಣ್ಣಶೆಟ್ಟಹಳ್ಳಿ ಗ್ರಾಮದ ಸ.ನಂ.೪೯ರ ಜಮೀನಿನಲ್ಲಿ ಅನಧಿಕೃತ ಒತ್ತುವರಿದಾರನ್ನು ಗುರುತಿಸಿ ತೆರವುಗೊಳಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಇ) ತೆರವುಗೊಳಿಸುವ ಜಮೀನನ್ನು ಸರ್ಕಾರದ ಇಲಾಖೆಗಳಿಗೆ ಸಾರ್ವಜನಿಕರ ಉದ್ದೇಶಕ್ಕಾಗಿ ಅವಶ್ಯಕತೆ ಇದ್ದಲ್ಲಿ ನಿಯಮಾನುಸಾರ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಡಾ॥ ಎಂ.ಸಿ. ಸುಧಾಕರ್ : ಅಧ್ಯಕ್ಷರೇ ಈ ಕೆರೆ ೧೯.೩೧ ಎಕರೆ ಇದೆ. ೧೯೯೩-೯೪ರಲ್ಲಿ breached tank ಅಂತ ಕಂದಾಯ ಇಲಾಖೆಗೆ ೫ ಎಕರೆ, ತೋಟಗಾರಿಕೆ ಇಲಾಖೆಗೆ ೪ ಎಕರೆ ಅರಣ್ಯ ಇಲಾಖೆಗೆ ೫ ಎಕರೆ ಕೊಟ್ಟಿದ್ದಾರೆ. ಅಲ್ಲಿ ಒತ್ತುವರಿಯಾಗಿದ್ದುದು ಅವತ್ತಿಗೇ ಸರ್ಕಾರದ ಗಮನಕ್ಕೆ ಬಂದಿತ್ತು. ಆದರೆ ಅವರು ಇವತ್ತಿನವರೆಗೂ ಏನೂ ಕ್ರಮ ಕೈಗೊಳ್ಳಲಿಲ್ಲ. ೨೦೦೩ರಲ್ಲಿ ದಲಿತ ಸಂಘಟನೆಗಳು ಅಲ್ಲಿ ಸ್ಮಶಾನವಿರುವುದನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಅಂತ ಧರಣಿ ಮಾಡಿದ ಸಂದರ್ಭದಲ್ಲಿ ಆಗಿನ ಜಿಲ್ಲಾಧಿಕಾರಿಗಳು ಬಂದು ಸ್ಥಳಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಕೊಟ್ಟಿದ್ದರು. ಪರಿಣಾಮವಾಗಿ ಆಗಿನ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇದನ್ನು ತೆರವು ಗೊಳಿಸಬೇಕೆಂದು ಆದೇಶ ಹೊರಡಿಸಿದ್ದರೂ ಇವತ್ತಿನವರೆಗೂ ಏನೂ ಕ್ರಮ ಜರುಗಿಲ್ಲ. ನಾನು ಸುಮಾರು ಒಂದು ವರ್ಷದಿಂದ ಪ್ರಯತ್ನಿಸುತ್ತಿದ್ದೇನೆ. ಪ್ರಧಾನ ಕಾರ್ಯದರ್ಶಿಗಳಿಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಕೊಟ್ಟಿದ್ದೆ. ಒತ್ತುವರಿ ಮಾಡಿಕೊಂಡಿರುವ ಬಹಳ ಪ್ರಭಾವಿ ವ್ಯಕ್ತಿಗಳು ಆ ಕಡತವನ್ನೇ ಮಾಯ ಮಾಡುವ ಮಟ್ಟಕ್ಕೆ ಹೋಗಿದ್ದಾರೆ. ಈಗ ಯಾವಾಗ ಕ್ರಮ ಕೈಗೊಂಡು ಎಷ್ಟು ದಿವಸದಲ್ಲಿ ನಮಗೆ ತೆರವುಗೊಳಿಸಿ ಕೊಡುತ್ತೀರಿ ಅಂತ ಸಚಿವರನ್ನು ಕೇಳುತ್ತೇನೆ.

ಶ್ರೀ ಜಗದೀಶ ಶೆಟ್ಟರ್ : ಅಧ್ಯಕ್ಷರೇ ಒಟ್ಟು ಈ ಸರ್ವೆ ನಂ. ನಲ್ಲಿ ೨೪.೩ ಎಕರೆ ಭೂಮಿ ಇದೆ. ಇದರಲ್ಲಿ ನಾವು ಅರಣ್ಯ ಇಲಾಖೆಗೆ ೪ ಎಕರೆ ಮತ್ತು ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ನೌಕರರ ಸಹಕಾರ ಸಂಘಕ್ಕೆ ೫ ಎಕರೆ ಜಮೀನು ಹಂಚಿಕೆ ಮಾಡಿದ್ದೇವೆ. ಇನ್ನುಳಿದ ೧೫.೩೧ ಎಕರೆಯಲ್ಲಿ ೬ ಮಂದಿ ೧.೨೦ ಎಕರೆಯಲ್ಲಿ ಬಗರ್‌ಹುಕುಂ ಸಾಗುವಳಿ, ಫಾರಂ ನಂ. ೫೩ ಕೊಟ್ಟಿದ್ದಾರೆ. ಇದು ಕೆರೆ ತೋಪು ಅಂತ ಈ ಅರ್ಜಿಗಳು ತಿರಸ್ಕೃತವಾಗಿದೆ. ಹೀಗಾಗಿ ೧೫.೩೧

ಎಕರೆ ಒಂದು ಕಡೆ ಮತ್ತೊಂದು ಕಡೆ ೧.೨೦ ಗುಂಟೆ ಈ ರೀತಿ ಒತ್ತುವರಿ ಮಾಡಿರುವ ಜಮೀನಿನ ಬಗ್ಗೆ ಜಿಲ್ಲಾಧಿಕಾರಿಗಳು CEO ಚಿಕ್ಕಬಳ್ಳಾಪುರ, ಇವರಿಗೆ direction ಕೊಟ್ಟಿದ್ದಾರೆ. ಅವರು ತಕ್ಷಣ ಒತ್ತುವರಿ ತೆರವುಗೊಳಿಸಬೇಕೆಂದು ನೋಟೀಸ್ ಕೊಟ್ಟು ಒತ್ತುವರಿಯಾಗಿರುವುದನ್ನು ಖಿಲ್ಲ ಮಾಡಿಸಿ ಆದಷ್ಟು ಬೇಗ ಸರ್ಕಾರದ ವಶಕ್ಕೆ ಪಡಯುತ್ತೇವೆ. ಅನಂತರ ಸರ್ಕಾರದ ಇನ್ನಿತರ ಕೆಲಸಗಳಿಗಾಗಿ ಈ ಜಮೀನನ್ನು ಕಾಯ್ದಿರಿಸುತ್ತೇವೆ.

ಡಾ॥ ಎಂ.ಸಿ. ಸುಧಾಕರ್ : ಜಿಲ್ಲಾಧಿಕಾರಿಗಳು ೨೬-೨-೨೦೦೭ ರಲ್ಲಿ ಉಪ. ಸಹಾಯಕ ಆಯುಕ್ತರಿಗೆ ಪತ್ರ ಬರದು ಈಗ್ಗೆ ೧ ತಿಂಗಳು ೧೦ ದಿವಸದಾಯಿತು. ಇನ್ನೊಂದು ಕಾಲಾವಕಾಶ ಬೇಕಾ? ಏಕಿದರ ಬಗ್ಗೆ ತಾತ್ಸಾರ? ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಜಗದೀಶ ಶೆಟ್ಟರ್ : ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಒತ್ತುವರಿ ಕೇವಲ ಚಿಂತಾಮಣಿಗೆ ಸೀಮಿತವಲ್ಲ, ಬೆಂಗಳೂರು ಸುತ್ತಮುತ್ತ ೧೮ ಸಾವಿರ ಎಕರೆ ಈಗಾಗಲೇ ನಾವು identify ಮಾಡಿದ್ದೇವೆ. ಅದೇ ರೀತಿ ಚಿಂತಾಮಣಿ ಭೂಮಿಯನ್ನು ಸಹ ಆದಷ್ಟು ಬೇಗ ಒತ್ತುವರಿ ಮುಕ್ತಗೊಳಿಸಿ ಸರ್ಕಾರ ವಶಪಡಿಸಿಕೊಳ್ಳುತ್ತೇವೆ. ಈ ಸದನದಲ್ಲಿ ನಾನು ಸ್ಪಷ್ಟವಾಗಿ ಭರವಸೆ ಕೊಡುತ್ತಿದ್ದೇನೆ.

ಕೆರೆಗಳ ಹೂಳೆತ್ತುವುದು

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೪೫ (೨೩೬೪)

ಸದಸ್ಯರ ಹೆಸರು : ಶ್ರೀ ಆಂಜನೇಯ. ಹೆಚ್ (ಭರಮಸಾಗರ)

ಉತ್ತರಿಸುವವರು : ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಪ್ರಶ್ನೆ

ಅ) ಭರಮಸಾಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳ ಹೂಳೆತ್ತುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ;